ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 02

ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶಗೌಡ

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 29.01.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪ್ರಸ್ತುತ ಸಾಲಿನಲ್ಲಿ ಕೋವಿಡ್ ಸಂಕಷ್ಟದ ಕಾರಣ ಸಾರಿಗೆ ಇಲಾಖೆ ನೌಕರರಿಗೆ ಈವರೆವಿಗೂ ವೇತನ ಪಾವತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇಲಾಖೆಯ ನೌಕರರಿಗೆ ಶೀಘ್ರ ವೇತನ ಪಾವತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಕೋವಿಡ್-19ರ ಸಂಕಷ್ಟದ ಕಾರಣ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸಾರಿಗೆ ಆದಾಯದಲ್ಲಿ ಕೊರತೆ ಉಂಟಾಗಿದ್ದರಿಂದ, ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರ ಏಪ್ರಿಲ್-2020ರ ಮಾಹೆಯಿಂದ ನವೆಂಬರ್-2020ರವರೆಗಿನ ವೇತನ ವೆಚ್ಚಕ್ಕಾಗಿ ಸರ್ಕಾರವು ಈ ಕೆಳಕಂಡಂತೆ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಿ, ವೇತನ ಪಾವತಿಸಲಾಗಿರುತ್ತದೆ:

ಸಂಸ್ಥೆಗಳು	ಮೊತ್ತ (ರೂ. ಕೋಟಿಗಳು)
ಕ.ರಾ.ರ.ಸಾ.ನಿಗಮ	563.55
ಬೆಂ.ಮ.ಸಾ.ಸಂಸ್ಥೆ	519.86
ವಾ.ಕ.ರ.ಸಾ.ಸಂಸ್ಥೆ	369.41
ಈ.ಕ.ರ.ಸಾ.ಸಂಸ್ಥೆ	329.89
ಒಟ್ಟು	**1782.71**

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಸಾರಿಗೆ ಇಲಾಖೆಯ ನೌಕರರಿಗೆ ಎಷ್ಟು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ; ವೇತನ ಪಾವತಿಗೆ ಅಗತ್ಯವಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಸಾರಿಗೆ ಸಂಸ್ಥೆಗಳ ನೌಕರರಿಗೆ ಏಪ್ರಿಲ್-2020ರಿಂದ ನವೆಂಬರ್-2020 ರವರೆಗೆ ಪೂರ್ಣ ಪ್ರಮಾಣದ ವೇತನವನ್ನು ಪಾವತಿಸಲಾಗಿದೆ. ಡಿಸೆಂಬರ್-2020ರ ಮಾಹೆಯಲ್ಲಿ ಸಾರಿಗೆ ಆದಾಯದ ಕೊರತೆಯಿಂದಾಗಿ ಶೇ.50ರಷ್ಟು ವೇತನವನ್ನು ಪಾವತಿ ಮಾಡಲಾಗಿದೆ. ನಾಲ್ಕು ಸಾರಿಗೆ ಸಂಸ್ಥೆಗಳಿಗೆ ವೇತನ ಪಾವತಿಗಾಗಿ ಪ್ರತಿ ಮಾಹೆಯಾನ ಅಗತ್ಯವಿರುವ ಮೊತ್ತದ ವಿವರ ಈ ಕೆಳಕಂಡಂತಿದೆ:

ಸಂಸ್ಥೆಗಳು	ಮೊತ್ತ (ರೂ. ಕೋಟಿಗಳು)
ಕ.ರಾ.ರ.ಸಾ.ನಿಗಮ	101.76
ಬೆಂ.ಮ.ಸಾ.ಸಂಸ್ಥೆ	98.62
ವಾ.ಕ.ರ.ಸಾ.ಸಂಸ್ಥೆ	65.42
ಈ.ಕ.ರ.ಸಾ.ಸಂಸ್ಥೆ	58.20
ಒಟ್ಟು	**324.00**

ಕ್ರ.ಸಂ	ಪ್ರಶ್ನೆ	ಉತ್ತರ
ಇ)	ರಾಜ್ಯದ ಯಾವ ವಿಭಾಗದ ಸಾರಿಗೆ ಸಂಸ್ಥೆ ಪ್ರಸಕ್ತ ಸಾಲಿನಲ್ಲಿ ನಷ್ಟದಲ್ಲಿದೆ; ಪ್ರಸಕ್ತ ಸಾಲಿನಲ್ಲಿ ಸಾರಿಗೆ ಇಲಾಖೆಯ ಆದಾಯದ ಗುರಿಯಲ್ಲಿ ಎಷ್ಟು ಪ್ರಗತಿ ಸಾಧಿಸಲಾಗಿದೆ; (ಅಂಕಿ ಅಂಶ ಸಹಿತ ಮಾಹಿತಿ ನೀಡುವುದು)	ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳು ಪ್ರಸಕ್ತ ಸಾಲಿನಲ್ಲಿ ನಷ್ಟದಲ್ಲಿರುತ್ತವೆ. ಸಾರಿಗೆ ಆದಾಯದ ಗುರಿಯಲ್ಲಿ ಸಾಧಿಸಲಾದ ಪ್ರಗತಿಯನ್ನು ಅಂಕಿ ಅಂಶ ಸಹಿತ ಮಾಹಿತಿ ಈ ಕೆಳಕಂಡಂತಿದೆ:

(ರೂ. ಕೋಟಿಗಳಲ್ಲಿ)

ಸಂಸ್ಥೆಗಳು	ಸಾರಿಗೆ ಆದಾಯದ ಗುರಿ	ಗಳಿಸಲಾದ ಆದಾಯ	ಶೇ.ವಾರು ಸಾಧಿಸಲಾದ ಪ್ರಗತಿ
ಕ.ರಾ.ರ.ಸಾ.ನಿಗಮ	2837.34	868.13	30.6
ಬೆಂ.ಮ.ಸಾ.ಸಂಸ್ಥೆ	1403.00	381.00	27.16
ವಾ.ಕ.ರ.ಸಾ.ಸಂಸ್ಥೆ	1523.57	479.55	31.5
ಈ.ಕ.ರ.ಸಾ.ಸಂಸ್ಥೆ	1256.06	516.48	41.12

...2

		ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ 2020-21ನೇ ಸಾಲಿನಲ್ಲಿ ರಾಜಸ್ವ ಸಂಗ್ರಹಣೆ ಗುರಿ ರೂ.7115.00 ಕೋಟಿಗಳಾಗಿದ್ದು, ಡಿಸೆಂಬರ್ 2020ರ ಅಂತ್ಯಕ್ಕೆ ಗುರಿ ರೂ.5336.13 ಕೋಟಿಗಳಿಗೆ ಎದುರಾಗಿ ರೂ.3615.21 ಕೋಟಿ ರಾಜಸ್ವ ಸಂಗ್ರಹಣೆ ಮಾಡಲಾಗಿದ್ದು, ಶೇ.67.75ರಷ್ಟು ಗುರಿ ಸಾಧಿಸಲಾಗಿದೆ.
ಈ)	ಸಾರಿಗೆ ಇಲಾಖೆಯ ಪ್ರಮುಖ ಸೇವೆಗಳಾದ ವಾಹನದ ಮಾಲೀಕತ್ವ ವರ್ಗಾವಣೆ, ಸರಕು ಸಾಗಾಣೆ ಪರವಾನಗಿ, ಫಿಟ್‌ನೆಸ್ ಪ್ರಮಾಣ ಪತ್ರ ನೀಡುವಿಕೆ, ಆನ್‌ಲೈನ್ ಪ್ರಕ್ರಿಯೆ ಜಾರಿಯಲ್ಲಿದೆಯೇ;	ವಾಹನದ ಮಾಲೀಕತ್ವ ವರ್ಗಾವಣೆ, ಸರಕು ಸಾಗಾಣೆ ಪರವಾನಗಿ ಮತ್ತು ಅರ್ಹತಾ (ಫಿಟ್‌ನೆಸ್) ಪ್ರಮಾಣಪತ್ರ ನೀಡುವಿಕೆ (ಸಾರಿಗೆ) ಸೇವೆಗಳನ್ನು ಆನ್‌ಲೈನ್ ಮೂಲಕ ನೀಡುವ ಬಗ್ಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.
ಉ)	ಜಾರಿಯಾಗಿದ್ದರೆ ಈ ಸೇವೆಗಳ ಆನ್-ಲೈನ್ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ಸಮರ್ಪಕವಾಗಿ ಕಾರ್ಯನಿರ್ವಸುತ್ತಿದೆಯೇ? (ಮಾಹಿತಿ ನೀಡುವುದು)	ಸದರಿ ಆನ್‌ಲೈನ್ ಸೇವೆಗಳ ಆನ್‌ಲೈನ್ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಅದರ ಕಾರ್ಯಕ್ಷಮತೆಯನ್ನು ಆಧರಿಸಿ ಸದರಿ ಸೇವೆಗಳನ್ನು ಆನ್‌ಲೈನ್‌ಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 01 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯ ಮಂತ್ರಿಗಳು ಹಾಗೂ
ಸಾರಿಗೆ ಸಚಿವರು